# ಬಾಲ ಕಳೆದುಕೊಂಡ ಮನುಷ್ಯರು!



ತುಂಬ ವರುಷಗಳ ಹಿಂದಿನ ಕತೆಯಿದು. ಆಗ ಮನುಷ್ಯರಿಗೂ ಬಾಲವಿತ್ತು. ತಮ್ಮ ಬಾಲವನ್ನು ಮರದ ರೆಂಬೆಗಳಿಗೆ ಸುತ್ತಿ ಮಕ್ಕಳು ಜೋಕಾಲಿ ಆಡುತ್ತಿದ್ದರು. ದೊಡ್ಡವರು ಬೇಟೆಯಾಡುವಾಗ ಪ್ರಾಣಿಯ ಕುತ್ತಿಗೆಗೆ ಬಾಲ ಬಿಗಿದು ಕೊಲ್ಲುತ್ತಿದ್ದರು. ಬೇಟೆಯಾಡಿದ ಪ್ರಾಣಿಯನ್ನು ಬಾಲಕ್ಕೆ ಕಟ್ಟಿ ಎಳೆದು ತರುತ್ತಿದ್ದರು.

ಕೆಲವು ಸಲ ಎದುರಾಳಿಗಳಿಗೆ ಬಾಲದಿಂದ ರಪ್ಪನೆ ಹೊಡೆಯುತ್ತಿದ್ದರು. ತಮಗಾಗದಿದ್ದವರಿಗೆ ಮರೆಯಲ್ಲಿ ಕುಳಿತು ಬಾಲದಿಂದ ತಕ್ಕ ಶಾಸ್ತಿ ಮಾಡುತ್ತಿದ್ದರು. ಹೀಗಿರುವಾಗ ದೇವರು ಒಮ್ಮೆ ಚಂದದ ಚಿಗುರೆಯ ವೇಷದಲ್ಲಿ ಭೂಮಿಗೆ ಬಂದ. ಭೂಮಿಯ ಚೆಲುವನ್ನು ಮೆಚ್ಚಿ ಕಾಡನ್ನು ಸುತ್ತಿ ನಾಡಿಗೂ ಹೋದ.

ನಾಡಿನ ಜನರಿಗೆ ಚಿಗುರೆಯನ್ನು ಕಂಡು ಅಚ್ಚರಿಯಾಯಿತು. ಆ ಚೆಂದದ ಚಿಗುರೆಯನ್ನು ಹಿಡಿದು ಬೇಯಿಸಿ ತಿನ್ನಲು ಯೋಚಿಸಿದರು. ಮೆಲ್ಲಗೆ ಅದನ್ನು ಸುತ್ತುವರಿದು ತಮ್ಮ ಬಾಲಗಳಿಂದ ಬಂಧಿಸಿ ಮನೆಗೆ ಎಳೆದು ತರಲು ಪ್ರಯತ್ನಿಸಿದರು!

ಆದರೆ ದೇವರು ತುಂಬ ಶಕ್ತಿವಂತ. ಅವರನ್ನೆಲ್ಲ ತಾನೇ ಕಾಡಿಗೆ ಎಳೆದು ತಂದುಬಿಟ್ಟ! ಕಾಡಿನಲ್ಲಿ ಅವರೆಲ್ಲರ ಬಾಲ ಹಿಡಿದು ಗಿರಗಿರನೆ ತಿರುಗಿಸಿದ. ಎಲ್ಲರ ಬಾಲವನ್ನೂ ಕಿತ್ತುಕೊಂಡು ಕಳುಹಿಸಿದ!

ನಂತರ ಊರಿನಲ್ಲಿದ್ದವರ ಬಾಲವೂ ನಿಧಾನವಾಗಿ ಉದುರಿ ಹೋಯಿತು! ಅಂದಿನಿಂದ ಮನುಷ್ಯರು ಬಾಲವಿಲ್ಲದವರಾದರು!

**(ಸಂಗ್ರಹ) ಗಣಪತಿ ಬಾಳೆಗದ್ದೆ**

# ಕಂದನ ಕೊರಗು



ನಾನೇನಂಥ ಕೆಟ್ಟವ್ನಲ್ಲ
ಹಂಗಂದ್ರ್ಯಾರೂ ನಂಬೋದಿಲ್ಲ!

ಪಾತ್ರೇಲಿದ್ದ ಹಾಲನ್ನೆಲ್ಲ
ಮಿಯಾಂವ್ ಬೆಕ್ಕಿಗೆ ಹಾಕಿದ್ದಕ್ಕೆ
ಸುಮ್ನೆ ನನ್ನ ಬೈಯ್ತಾರೆ
ಕೆಟ್ಟವನೆಂದು ಹೇಳ್ತಾರೆ!

ಅಡುಗೆ ಮನೆಗೆ ಹೋಗಿ ನಾನು
ಅಮ್ಮ ಮಾಡಿದ ಸಾರಿಗೆ ಸೇರು
ಉಪ್ಪನ್ನಷ್ಟೆ ಹಾಕಿದ್ದಕ್ಕೆ
ಕೆಟ್ಟವನೆಂದು ಹೇಳ್ತಾರೆ!

ಅಮ್ಮನ ಸೀರೆ ಚಿಂದಿ ಮಾಡಿ
ಬಾಲಂಗೋಚಿ ಕಟ್ಟಿಕೊಂಡು
ಬಯಲಲ್ಲಿ ಪಟವ ಆಡ್ಸಿದ್ದಕ್ಕೆ
ಕೆಟ್ಟವನೆಂದು ಹೇಳ್ತಾರೆ!

ಅಪ್ಪನ ಆಫೀಸು ಪುಸ್ತಕದಲ್ಲಿ
ಒಂದು ಎರಡು ಬರೆದದ್ದಕ್ಕೆ
ಸುಮ್ನೆ ನನ್ನ ಬೈಯ್ತಾರೆ
ಕೆಟ್ಟವನೆಂದು ಹೇಳ್ತಾರೆ!

ಸೋಮಾರಿಯಾಗಿ ಕೂರ್ದೆ ಮಕ್ಳು
ಗೆಲುವಾಗಿ ಇರ್ಬೇಕು ಅಂತಾರೆ
ಹಂಗಂತ ನಾನು ಮುಂದಕೆ ಬಂದ್ರೆ
ಕೆಟ್ಟವನೆಂದು ಹೇಳ್ತಾರೆ!

**-ಹೊರೆಯಾಲ ದೊರೆಸ್ವಾಮಿ, ಮೈಸೂರು**